ಅಧ್ಯಕ್ಷರು : ಈ ವಿಷಯವನ್ನು ಬಜೆಟ್ ಟೈಂನಲ್ಲಿ ತರಬೇಕು. ಆದರೆ ನೀವು ಶೂನ್ಯ ವೇಳೆಯಲ್ಲಿ ಮಾತನಾಡಿದರೆ ಹೇಗೆ? ಅದಕ್ಕೆ ಇನ್ನು ಫೈನಾನ್ಸ್ ಮಿನಿಸ್ಟರ್ ರಿಪ್ಲೈ ಕೊಡಬೇಕಾಗಿದೆ. ಬಜೆಟ್ ಮೇಲೆ ಡಿಸ್‌ಕಷನ್ ಆಗಬೇಕಾಗಿದೆ.

ಶ್ರೀ ವಸಂತ ವಿ. ಸಾಲಿಯಾನ : ನಾಳೆ ರಿಪ್ಲೈ ಕೊಡುವ ಮೊದಲು ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಇಡೀ ಕರ್ನಾಟಕ ರಾಜ್ಯದಲ್ಲಿ ಜನ ಸಾಮಾನ್ಯರಿಗೆ ಏನು ತೊಂದರೆಯಾಗಿದೆ ಅದನ್ನು ಖಂಡಿತವಾಗಿ ಸರಳಗೊಳಿಸಬೇಕಾಗಿ ಕೋರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ತಮ್ಮ ಅಭಿಪ್ರಾಯವನ್ನು ನಾನು ಗ್ರಹಿಸಿಕೊಂಡಿದ್ದೇನೆ. ಈಗ ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ, ಬಜೆಟ್ ಮೇಲೆ ಚರ್ಚೆ ಮಾಡುವಾಗ ಇದರ ಬಗ್ಗೆ ಮಾತನಾಡುತ್ತೇನೆ. ನಮ್ಮ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸರ್ಕಾರದಿಂದ ಈ ಭರವಸೆಯನ್ನು ಕೇಳಿಕೊಳ್ಳಿ.

ಅಧ್ಯಕ್ಷರು : ನಿಮ್ಮ ಭಾವನೆಗಳನ್ನು ಸರ್ಕಾರಕ್ಕೆ ತಿಳಿಸಲಾಯಿತು, ಉತ್ತರ ಕೊಡುವ ವೇಳೆಗೆ ಏನು ಹೇಳಬೇಕು ಎಂದು ಇದ್ದೀರಾ ಅದನ್ನು ಹೇಳಿ.

ಇ) ಮೈಸೂರಿನ ದೇವನೂರು ಕೆರೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.

ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ದೇವನೂರು ಎಂಬ ಕೆರೆ ಇದೆ; ಇದರ ಸುತ್ತಾ - ಮುತ್ತಾ ಬಡಾವಣೆಗಳು ಅಭಿವೃದ್ಧಿಯಾಗಿದೆ. ಆ ಕೆರೆ ಯಾವುದೇ ಒಂದು ಬೇಸಾಯಕ್ಕೆ ಅನುಕೂಲ ಇಲ್ಲದೆ, ಮತ್ತು ಆ ಕೆರೆಯಲ್ಲಿ ನೀರೂ ಸಹ ಇಲ್ಲದೆ ಅಲ್ಲಿ ಬರೀ ಗಲೀಜು ತುಂಬಿಕೊಂಡು ಆ ಬಡಾವಣೆಯ ಸುತ್ತಾ-ಮುತ್ತಾ ವಾಸ ಮಾಡುವಂತಹವರಿಗೆ ಸೊಳ್ಳೆ ಕಾಟ ವಿಪರೀತವಾಗಿದೆ. ಆದುದರಿಂದ ಅಲ್ಲಿ ವಾಸ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಆ ಕೆರಯನ್ನು ನಮ್ಮ ನಗರಾಭಿವೃದ್ಧಿ ಪ್ರಾಧಿಕಾರದವರು ನಮಗೆ ವಹಿಸಿಕೊಡಿ ನಾವು ಅದನ್ನು ಅಭಿವೃದ್ಧಿ ಮಾಡಿ, ಮತ್ತು ಅಲ್ಲಿ ಒಂದು ಈಜುಕೊಳ ಹಾಗೂ ಕ್ರೀಡಾ ಸಮುಚ್ಛಯ ಮಾಡುತ್ತೇವೆ ಎಂಬ ಮನವಿಯನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು ಇದಕ್ಕೆ ಪರಿಸರ ಮಾಲೀನ್ಯ ಇಲಾಖೆಯಿಂದ ಒಂದು ಸರ್ಟಿಫಿಕೇಟ್ ಬೇಕು ಎಂದರು. ನಂತರ ಸರ್ಟಿಫಿಕೇಟ್ ಕೊಟ್ಟ ನಂತರ ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಮತ್ತು ಅದಕ್ಕೆ ಬೆಲೆ ನಿಗಧಿಯಾಗಬೇಕು ಎಂದು ಹೇಳಿದರು. ಆದರೆ ಸಬ್ ರಿಜಿಸ್ಟ್ರಾರ್ ಅವರಿಂದ ಬೆಲೆ ನಿಗಧಿಯಾಗಿದೆ. ಇದನ್ನು ಖಾಸಗಿ ಅವರಿಗೂ ಕೊಡುತ್ತಿಲ್ಲ. ಆದರಿಂದ ಅಲ್ಲಿರುವಂತಹ ಸುತ್ತಾ -ಮುತ್ತಾ ವಾಸ ಮಾಡುವಂತಹ ಜನರಿಗೆ ಬಹಳಷ್ಟು ಹಿಂಸೆಯಾಗಿದೆ, ಅಲ್ಲಿ ಸೊಳ್ಳೆ ಕಾಟ ಒಂದೇ ಅಲ್ಲ, ಕೆಟ್ಟ ವಾಸನೆಯೂ ಸಹ ಇದೆ. ಆದಕಾರಣ ದಯಮಾಡಿ ತಕ್ಷಣ ಆ ಕೆರೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟು ನೈರ್ಮಲ್ಯವನ್ನು ಕಾಪಾಡುವ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಮೂಡಾದವರು ಕೇಳುತ್ತಾರೆ, ನಾವೇ ಅದನ್ನು ಈಜುಕೊಳ ಮಾಡುತ್ತೇವೆ. ಅದನ್ನು ನಡೆಸುತ್ತೇವೆ. ಎಂದು. ಬಹುಶ: ಈಗ ನಾವು ನಮ್ಮ ಯುವ ಜನ ಸೇವಾ ಇಲಾಖೆಗೆ ಹೇಳಿ ಈ ಕೆಲಸ ಮಾಡಬೇಕು. ಮಾನ್ಯ ಸಭಾಧ್ಯಕ್ಷರೆ, ಇದು ಬಹಳ

ಒಳ್ಳೆಯ ಸಲಹೆ, ನಾವು ಇದನ್ನು ಸರ್ಕಾರಕ್ಕೆ ತಿಳಿಸಿ, ಮೂಡಾಗೆ ಕೊಡುವುದಕ್ಕೆ, ಇಲಾಖೆಯ ನಿಯಮಾನುಸಾರ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಸಭಾಧ್ಯಕ್ಷರೆ,.....

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ.

ಈ) ಸಿಂಧನೂರು ತಾಲ್ಲೂಕಿನಲ್ಲಿ ಕೆರೆ ನಿರ್ಮಿಸಲು ಭೂಮಿ ಖರೀದಿ :

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದಂತಹ ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 60 ರಿಂದ 70 ಪರ್ಸೆಂಟ್ ಹಳ್ಳಿಗಳಲ್ಲಿ ಅಂತರ್ ಜಲದಲ್ಲಿ ಸಿಹಿ ನೀರು ಸಿಗುತ್ತಿಲ್ಲ. ಆದರೆ ಅನಿವಾರ್ಯವಾಗಿ ನಾವು ಕೆರೆ ಮಾಡಿ, ಕುಡಿಯುವ ನೀರನ್ನು ಪೂರೈಸಬೇಕು ಎಂದರೂ ಸಹ ತಾವು ಬೇರೆ ಬೇರೆ ಯೋಜನೆಗಳಲ್ಲಿ ಕೆರೆ ಮಾಡುವುದಕ್ಕೆ ಹಣ ಒದಗಿಸಿದರೂ ಸಹ ಆ ಕೆರೆ ಮಾಡಬೇಕಾದಂತಹ ಭೂಮಿ ಖರೀದಿ ಮಾಡುವುದಕ್ಕೆ ಯಾವುದೇ ಯೋಜನೆಯಲ್ಲಿ ಅವಕಾಶ ಇರುವುದಿಲ್ಲ. ಆ ಕಾರಣದಿಂದ ಇವತ್ತು ಕೆರೆ ಮಾಡುವುದಕ್ಕೆ ಬೇಕಾಗಿರುವಂತಹ ಭೂಮಿ ಖರೀದಿ ಮಾಡುವುದಕ್ಕೆ ಸರ್ಕಾರ ಹಣದ ಅವಶ್ಯಕತೆಯನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇದು ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂತಹ ಕೆಲಸ. ನೀರಾವರಿಯನ್ನು ಕೊಡಬೇಕಾಗಿರುವಂತಹುದು, ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸ ಬೇಕಾಗಿರುವಂತಹ ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂಥ ಕೆಲಸ. ಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಜಮೀನನ್ನು ಖರೀದಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಹಣವನ್ನು ಒದಗಿಸಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಸಭಾಧ್ಯಕ್ಷರೆ, ಈ ವಿಷಯವನ್ನು ಇಲಾಖೆಯ ಮುಖಾಂತರ ಜಿಲ್ಲಾ ಪಂಚಾಯತ್‌ಗೆ ತಿಳಿಸಿ ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ ಎಂಬ ವಿಚಾರವನ್ನು ಹೇಳಬಯಸುತ್ತೇನೆ.

ಉಲ್ಲಾಳ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವಾಹನ ಚಾಲಕರ ಸದಸ್ಯರಿಗೆ ನಿವೇಶನ ನೀಡುವ ಬಗ್ಗೆ

ಶ್ರೀ ಕೆ. ಜಯರಾಂ ಶೆಟ್ಟಿ (ಉಲ್ಲಾಳ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಸೋಮೇಶ್ವರ ಗ್ರಾಮದಲ್ಲಿ ಸರ್ವೆ ನಂ 22 I, ಮತ್ತು 222 ಎ, ಸುಮಾರು ಮೂರು ಎಕರೆ, 70 ಎಕರೆ ಸೆಂಟ್ಸ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವಾಹನ ಚಾಲಕರ ಸಂಘ, ದಕ್ಷಿಣ ಕನ್ನಡ ಜಿಲ್ಲೆ, ಇವರು ಮನೆ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಮತ್ತು ಮೈಸೂರು ವಿಭಾಗ ಅಧಿಕಾರಿಗಳು ಈ ಅರ್ಜಿಯನ್ನು ಪುರಸ್ಕರಿಸಿ, ರಾಜ್ಯ ಸರ್ಕಾರಕ್ಕೆ ನಿವೇಶನ ಕೊಡುವುದಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಈಗಾಗಲೇ ಈ ಅರ್ಜಿಯನ್ನು ಕಳುಹಿಸಿ ಸುಮಾರು 2- 3 ವರ್ಷ ಕಳೆದಿದೆ. ಕಳೆದ ವರ್ಷ ಊರಿನ ಮತ್ತು ಆಸುಪಾಸಿನ ಜನ ಎಲ್ಲಾ ಬಂದು ಈ ಜಾಗವನ್ನು ಎನ್‌ಕ್ರೋಚ್ ಮಾಡಿದ್ದರು. ಆದರೆ ಜಿಲ್ಲಾಧಿಕಾರಿಗಳ ಪ್ರಯತ್ನದಿಂದ ಅದನ್ನು ತೆರವುಗೊಳಿಸಿ ಅಲ್ಲಿ ಫೆನ್ಸಿಂಗ್ ಮಾಡಲಾಗಿತ್ತು. ಆದರೆ ಇದುವರೆಗೆ ರಾಜ್ಯ ಸರ್ಕಾರದ ಈ ನೌಕರರಿಗೆ ಮನೆ ನಿವೇಶನ ಕೊಡುವ ಬಗ್ಗೆ ಯಾವುದೇ ರೀತಿಯಾದಂತಹ ವ್ಯವಸ್ಥೆ ಮಾಡಿಲ್ಲ. ರಾಜ್ಯ